# ಶೂನ್ಯ-ಸ್ವರ್ಗ-ನರಕ

ಕೆ.ಬಿ.ಪ್ರಭುಪ್ರಸಾದ್

ಹರಿತವಾದ ಬುದ್ಧಿಯಿದ್ದರೆ ಮಾತ್ರ ಧರ್ಮದ ಸೂಕ್ಷ್ಮತೆಗಳು ಮನಸ್ಸಿಗೆ ಹೊಳೆಯುತ್ತವೆ. ಸಾಧಕನ ಮನಸ್ಸಿನಿಂದ ಪೂರ್ವ ಗ್ರಹಗಳನ್ನು ತೆಗೆದುಹಾಕಿ ಸ್ವತಂತ್ರವಾಗಿ ಆಲೋಚಿಸುವುದನ್ನು ಗುರು ಪ್ರಚೋದಿಸಬಲ್ಲ. ಅಂತಹ ಕಥೆಗಳನ್ನು ನೀಡಿರುವ ಲೇಖಕರು ಮೈಸೂರಿನ ನಿವಾಸಿಗಳು, ಪ್ರಸಿದ್ಧ ಸಾಹಿತಿಗಳು ಹಾಗೂ ಈ ಪತ್ರಿಕೆಯ ಸಲಹಾಮಂಡಳಿಯ ಸದಸ್ಯರು

ಎಷ್ಟು ವರ್ಷಗಳಿಂದ ಕವಿದ ಕತ್ತಲಾದರೇನು, ಬೆಳಕು ಹೊತ್ತಿಸಿದ ಕ್ಷಣವೇ ಮಾಯವಾಗುತ್ತದೆ. ಜ಼ೆನ್ ಕಥೆ ಎಂದರೆ ಬೆಂಕಿಕಡ್ಡಿಯನ್ನು ಗೀರಿದ ಹಾಗೆ. ತಕ್ಷಣ ಬೆಳಕು—ಅರಿವಿನ ಬೆಳಕು—ಹೊತ್ತಿಕೊಳ್ಳುತ್ತದೆ. ಪುಟ್ಟ ಕಥೆ. ಕೇಳುವುದಕ್ಕೂ ಚೆಂದ. ವಿವರಿಸುವ ಅಗತ್ಯವಿಲ್ಲ. ಕೆಲವು ತಕ್ಷಣ ಅರ್ಥವಾಗುತ್ತವೆ. ಕೆಲವಕ್ಕೆ ಕೊಂಚ ಆಲೋಚನೆ ಅಗತ್ಯ. ಅರ್ಥವಾದ ಮೇಲೂ ಆಲೋಚಿಸುತ್ತ, ಮನನ ಮಾಡುತ್ತ, ಅರ್ಥದ ಒಳಪದರಗಳು ತೆರೆಯುತ್ತ ಹೆಚ್ಚು ಹೆಚ್ಚು ಮುದವುಂಟಾಗತೊಡಗುತ್ತದೆ. ಅದು ಅನುಭವಕ್ಕೆ ಮಾತ್ರ ವೇದ್ಯ. ವಿವರಿಸಲು ಹೊರಟರೆ ಅರ್ಥ ಸೂಕ್ಷ್ಮತೆ, ಭಾವಸೂಕ್ಷ್ಮತೆ ಹಾಳಾಗುವ ಸಂಭವವುಂಟು. ಆದುದ ರಿಂದ ಹಾಗೆ ಮಾಡಹೋಗದೆ ಈಗ ಕೆಲವು ಜ಼ೆನ್ ಕಥೆಗಳನ್ನು ಯಥಾವತ್ತಾಗಿ ನಿಮ್ಮ ಮುಂದಿಡುತ್ತೇನೆ.

## ಶೂನ್ಯವನ್ನು ಸಂಪಾದಿಸುವುದು ಹೇಗೆ?

ಅದೊಂದು ಹೊಸದಾಗಿ ತೆರೆದ ಬೌದ್ಧವಿಹಾರ. ಗುರು ಹ್ಯಾ-ಕು-ಜೊ ತನ್ನ ಕಾಲಾನಂತರ ವಿಹಾರವನ್ನು ನೋಡಿ ಕೊಳ್ಳುವ ಮುಖ್ಯನನ್ನು ಆರಿಸಬೇಕಾಗಿತ್ತು. ಅದಕ್ಕೊಂದು ಸಣ್ಣ ಪರೀಕ್ಷೆ. ಎಲ್ಲ ಶಿಷ್ಯರನ್ನೂ ಕರೆದು ಒಂದೆಡೆ ಸೇರಿಸಿದ. ಒಂದು ಹೂದಾನಿಯಲ್ಲಿ ನೀರನ್ನು ತುಂಬಿ ಮಧ್ಯೆ ಇಟ್ಟ. "ಇದರ ಹೆಸರು ಹೇಳದೆ ಇದೇನೆಂದು ಹೇಳಬಲ್ಲವರು ನಿಮ್ಮಲ್ಲಿ ಯಾರಿ ದ್ದೀರಿ, ಮುಂದೆ ಬನ್ನಿ, ಹೇಳಿ" ಎಂದು ಕೇಳಿದ. ಬಹಳ ಜನ ಏನೆಂದು ತಿಳಿಯದೆ ಸುಮ್ಮನಿದ್ದರು.

ಎಲ್ಲ ಶಿಷ್ಯರಿಗೂ ಹಿರಿಯನಾದವನು, ಮುಂದಿನ ಪೀಠಾಧಿ ಕಾರಿ ತಾನೆ ಎಂದು ಭಾವಿಸಿದವನು, ಮೊದಲು ಹೇಳಿದ: "ಅದು ನೇರವಾಗಿ ನಿಂತಿದೆ. ಒಳಗೆಲ್ಲ ಪೊಳ್ಳು. ನೀರು ತುಂಬಿ ದ್ದರೂ ಕದಡದೆ ತುಳುಕದೆ ಇದೆ. ತಿಳಿದೂ ತಿಳಿಯದಂತಿರುವ ಉದಾಹರಣೆ."

ಇನ್ನೊಬ್ಬ ಶಿಷ್ಯ ತಾನು ಜಾಣ ಎಂದುಕೊಂಡವನು ನಂತರ ಹೇಳಿದ: "ಒಳಗೆ ನೀರಿದೆ, ಕೊಳವಲ್ಲ. ಏಕೆಂದರೆ ಇದನ್ನು ಎತ್ತಿಕೊಂಡು ಹೋಗಬಹುದು."

ಕಡೆಯಲ್ಲಿ ಅತ್ಯಂತ ಕಿರಿಯನಾದವನು, ಅಡಿಗೆಯವನಾಗಿ ಗುರುಸೇವೆ ಮಾಡುತ್ತಿದ್ದವನು ಮೇಲೆದ್ದ. ಮುಂದೆ ಬಂದು ಹೂದಾನಿಯನ್ನು ಕಾಲಿನಿಂದ ಒದ್ದ. ತುಂಬಿಟ್ಟ ನೀರೆಲ್ಲ ಹೊರ ಚೆಲ್ಲಿ ಹರಿದುಹೋಯಿತು. ಶೂನ್ಯವನ್ನು ಸಂಪಾದಿಸುವುದು ಹೇಗೆ ಎಂಬುದನ್ನು ತೋರಿಸಿದ ಆತನನ್ನೇ ಗುರುಗಳು ಮುಂದಿನ ಪೀಠಾಧಿಕಾರಿಯನ್ನಾಗಿ ಆರಿಸಿದರು.

ಇನ್ನೊಂದು ಕಥೆ:

## ಎಲ್ಲವೂ ಶೂನ್ಯಮಯ!

ಯಾಮಾವೋಕಾ ಒಬ್ಬ ಯುವ ಶಿಷ್ಯ. ಎಳೇ ನಿಂಬೇ ಕಾಯಿ. ಆಚಾರ್ಯ ಡೊ-ಕು-ಆನ್ ಬಳಿಗೆ ಬಂದು ತನ್ನ ಜ್ಞಾನವನ್ನು ಪ್ರದರ್ಶಿಸಬೇಕೆಂಬ ಚಪಲಕ್ಕೆ ಬಿದ್ದ.

"ಮನಸ್ಸು ಎಂಬುದಿಲ್ಲ. ದೇಹವೂ ಇಲ್ಲ. ಬುದ್ಧನೂ ಇಲ್ಲ. ಯಾರೂ ಹೆಚ್ಚಲ್ಲ. ಯಾರೂ ಕಡಿಮೆಯಲ್ಲ. ಯಾರೂ ಗುರು ವಲ್ಲ. ಯಾರೂ ಶಿಷ್ಯನಲ್ಲ. ಕೊಡುವುದೂ ಇಲ್ಲ. ಪಡೆಯು ವುದೂ ಇಲ್ಲ. ನಾವು ನೋಡುವ, ಭಾವಿಸುವ, ವಸ್ತುವೂ ಸತ್ಯವಾದುದಲ್ಲ. ಸತ್ಯವಾಗಿ ಇರುವುದು ಒಂದೇ ಒಂದು. ಅದು ಶೂನ್ಯ. ಕಾಣುವ ಈ ಲೋಕವೆಲ್ಲ, ಈ ವಸ್ತುಗಳೆಲ್ಲ ನಿಜದಲ್ಲಿ ಇಲ್ಲವೇ ಇಲ್ಲ."

ಆಚಾರ್ಯ ಡೋ-ಕು-ಆನ್ ಸುಮ್ಮನೆ ಗುಡಿಗುಡಿ ಸೇದುತ್ತ ಕುಳಿತಿದ್ದ. ಅದುವರೆಗೆ ಒಂದು ಮಾತೂ ಆಡಿರಲಿಲ್ಲ. ಕೇಳಿದ್ದೆಲ್ಲ ಆದಮೇಲೆ ಎದ್ದು ಬಂದು ಒಂದು ಕೋಲನ್ನೆತ್ತಿ ಕೊಂಡು ಯಾಮಾವೋಕಾನ ಬೆನ್ನಿಗೆ ಚೆನ್ನಾಗಿ ಬಾರಿಸಿದ, ತೀರಾ ಅನಿರೀಕ್ಷಿತವಾಗಿ. ಪೆಟ್ಟುತಿಂದ ಆತ ಕೆರಳಿ ನೆಗೆದ. ಗುರು: "ನೀನು ಹೇಳುವಂತೆ ಈ ಒಂದು ವಸ್ತುವೂ ನಿಜದಲ್ಲಿ ಇಲ್ಲವೇ ಇಲ್ಲ. ಎಲ್ಲವೂ ಶೂನ್ಯಮಯ! ಹೀಗಿರುವಾಗ ಕೆರಳಿದೆ ಏಕೆ? ನಿನಗೆ ನೋವಾಯಿತು ಏಕೆ? ನಿನ್ನ ಕೋಪ ಬಂದುದು ಎಲ್ಲಿಂದ? ಅದನ್ನು ಆಲೋಚಿಸು" ಎಂದು ಗುರು ಹೇಳಿದ.

ಮತ್ತೊಂದು ಕಥೆ:

## ಸ್ವರ್ಗ–ನರಕ

ಒಬ್ಬ ಸುಪ್ರಸಿದ್ಧ ಶೂರ ಸರದಾರ, ಗುರು ಹಾ–ಕು–ಯಿನ್‌ರ ಬಳಿಗೆ ಬಂದು ಕೇಳಿದ: "ಸ್ವಾಮಿ, ಗುರುಗಳೆ, ಸ್ವರ್ಗ–ನರಕ ಎಂಬ ಲೋಕಗಳು ನಿಜವಾಗಿಯೂ ಇರುವುವೇ? ಇದ್ದಲ್ಲಿ ಹೇಗೆ ಇರುವುವು? ದಯವಿಟ್ಟು ಹೇಳುವಿರಾ?"

"ಅಪ್ಪಾ, ನೀನು ಯಾರು?"

"ನಾನು ಮಹಾಸಾಮ್ರಾಟರ ಅಂಗರಕ್ಷಕ ದಳದವನು."

"ಛೇ. ಶುದ್ಧ ಸುಳ್ಳು. ನೋಡಲು ಭಿಕಾರಿಯಂತಿರುವೆ. ನಿನ್ನಂತಹವನನ್ನು ಅಂಗರಕ್ಷಕನನ್ನಾಗಿ ಮಾಡಿಕೊಂಡಿರುವ ಆ ಮಹಾಸಾಮ್ರಾಟ ಯಾರಪ್ಪಾ?"

ಕೆರಳಿದ ಶೂರ ತನ್ನ ಒರೆಯಿಂದ ಖಡ್ಗವನ್ನು ಹಿರಿದು ಝಳಪಿಸತೊಡಗಿದ.

"ಓಹೋ! ನಿನ್ನ ಬಳಿ ಒಂದು ಖಡ್ಗವೂ ಇದೆ ಎಂದ ಹಾಗಾಯಿತು. ಆದರೆ.. ಅಯ್ಯೋ ಆ ಕತ್ತಿಯೋ! ನಿನಗೇ ಪ್ರೀತಿ! ನನ್ನ ಕತ್ತನ್ನು ಕತ್ತರಿಸಬಹುದೆ ಈ ಮೊಂಡು ಕತ್ತಿ?"

ಯೋಧನಿಗೆ ಇನ್ನು ಸಹಿಸಲಾಗಲಿಲ್ಲ. ಖಡ್ಗವನ್ನು ಮೇಲೆತ್ತಿ ಮುನ್ನುಗ್ಗುತ್ತಾ ಬೆದರಿಸಿದ, "ಇಕೊ, ನಿನ್ನ ಕತ್ತುರುಳಿತು ಎಂದುಕೊ."

ಭಿಕ್ಷು–ಗುರು ಸ್ವಲ್ಪವೂ ವಿಚಲಿತನಾಗದೆ ಶಾಂತವಾಗಿ ಹೇಳಿದ:

"ಹ್ಞಾ, ಇದು ನಿನ್ನ ಒಂದು ಪ್ರಶ್ನೆಗೆ ಉತ್ತರ. ಈಗ ನೀನು ನರಕದ ಬಾಗಿಲುಗಳನ್ನು ತೆರೆಯುತ್ತಿರುವೆ."

ಆ ಮಾತು ಕೇಳಿದ ಯೋಧ ಹಿಮ್ಮೆಟ್ಟಿದ. ಒಂದು ಹೆಜ್ಜೆ ಹಿಂದೆ ಸರಿದು ಖಡ್ಗವನ್ನು ಒರೆಯೊಳಗಿಟ್ಟು ನಮಿಸಿದ, "ಕ್ಷಮಿಸಿ ಗುರುಗಳೇ, ತಿಳಿಯದೆ ಪ್ರಮಾದವೆಸಗಿಬಿಡುತ್ತಿದ್ದೆ."

ಗುರು ಮತ್ತೆ ಹೇಳಿದ: "ಇದೊ, ನಿನ್ನ ಇನ್ನೊಂದು ಪ್ರಶ್ನೆಗೆ ಉತ್ತರ ಇದು. ಈಗ ನೀನು ಸ್ವರ್ಗದ ಬಾಗಿಲನ್ನೇ ತೆರೆದೆ!"

---

## ಮನನ–ಮಾನ್ಯ

ಸಂಗ್ರಹ : ಮಧುಪ

ಜಗತ್ತನ್ನು ಬೆಳಗುವ ಬೆಳಕು ಯಾವುದು ಎಂಬ ಪ್ರಶ್ನೆಗೆ ಸಹಜವಾಗಿ ಬರುವ ಉತ್ತರ: 'ಸೂರ್ಯ' ಎಂದು. ಸೂರ್ಯ ಹಗಲು ಮಾತ್ರ ಇರುತ್ತಾನೆ. ರಾತ್ರಿಯಲ್ಲಿ ಬೆಳಗುವ ಬೆಳಕು ಯಾವುದು? 'ಚಂದ್ರ' ಮತ್ತು 'ನಕ್ಷತ್ರಗಳು'. ಚಂದ್ರನಾದರೋ ಸೂರ್ಯನ ಬೆಳಕನ್ನೇ ಪ್ರತಿಫಲಿಸುತ್ತಾನೆ. ದೂರದ ನಕ್ಷತ್ರಗಳ ಬೆಳಕು ಇದ್ದೂ ಇಲ್ಲದಂತೆ. ಸರಿ. ಸೂರ್ಯ–ಚಂದ್ರ–ನಕ್ಷತ್ರಗಳು ಇಲ್ಲದಾಗ ಬೆಳಗುವ ಬೆಳಕು ಯಾವುದು? ಎಂದು ಜನಕ ಮಹಾರಾಜ ಯಾಜ್ಞವಲ್ಕ್ಯರನ್ನು ಕೇಳಿದ. 'ಅಗ್ನಿಯೇ ಬೆಳಕು' ಎಂಬ ಉತ್ತರ ಬಂದಿತು. ಅಗ್ನಿಯೂ ಆರಿಹೋದಾಗ? 'ಶಬ್ದವೇ ಬೆಳಕು' ಎಂದರು ಯಾಜ್ಞವಲ್ಕ್ಯರು ಹೇಗೆ?

ಕತ್ತಲಲ್ಲಿ ಬಂಧುವಿನ ದನಿ ಕೇಳಿಯೇ ಅವರು ಯಾರೆಂದು ಹೇಳುತ್ತೀರಿ. ದನಿ ಬಂದ ಜಾಡು ಹಿಡಿದು ದಾರಿಯನ್ನು ಕಂಡುಕೊಳ್ಳುತ್ತೀರಿ. ಹೀಗೆಯೇ ವಾಸನೆಯೂ ಬೆಳಕು.

ಇಂದ್ರಿಯಗಳೂ ನಿದ್ರೆಯಲ್ಲಿ ಮುಳುಗಿ ನಿಷ್ಕ್ರಿಯವಾದಾಗ ಯಾವುದು ಬೆಳಕು? ಹೊರಗಿನ ಯಾವ ಬೆಳಕೂ ಇಲ್ಲ, ಯಾವ ಸಂಪರ್ಕವೂ ಇಲ್ಲ. ಸೂಕ್ಷ್ಮ ಮಾನಸಿಕ ಕ್ರಿಯೆಯಾಗಿ ಕನಸು ಬೀಳುತ್ತದೆಯಲ್ಲ. ಅಲ್ಲಿನ ಬೆಳಕು ಯಾವುದು? ಹಿಂದಿನ ನೆನಪುಗಳ, ಸಂಸ್ಕಾರಗಳ, ಸೂಕ್ಷ್ಮ ಅನುಭವಗಳನ್ನು ಮತ್ತೆ ಮನಸ್ಸಿನ ತೆರೆಯ ಮೇಲೆ ಮೂಡಿಸುವ ಬೆಳಕು ಯಾವುದು? ಕಣ್ಣು ಮುಚ್ಚಿಕೊಂಡಾಗಲೂ ಪ್ರಕಾಶಮಯ ಚಿತ್ರಗಳನ್ನು ಮನದೊಳಗೆ ಮೂಡಿಸುವ ಬೆಳಕು ಯಾವುದು?

ಜ್ಞಾನಿಗಳು ಋಷಿಗಳೂ ತಮ್ಮ ತಪಸ್ಸು–ಚಿಂತನಗಳಿಂದ ಉತ್ತರಿಸಿದರು: ಅದೇ ಸತ್ಯದ ಬೆಳಕು! ಅದೇ ಚಿತ್ಪ್ರಭೆ! ಅದೇ ಆನಂದದ ಬೆಳಕು!

ಸಾವಿಲ್ಲದ, ನೋವಿಲ್ಲದ, ಶಾಶ್ವತವಾದ ಅರಿವಿನ ಬೆಳಕು. ಶರೀರ–ಇಂದ್ರಿಯಗಳು ಯಾವುದನ್ನೂ ಅವಲಂಬಿಸದೆ, ತಾನೇ ತಾನಾಗಿ ಬೆಳಗುವ ಬೆಳಕು! ಅದೇ ಚೈತನ್ಯ. ಅದು ಇರುವುದರಿಂದಲೇ ದೇಹಕ್ಕೆ ಕಾಂತಿ, ಬುದ್ಧಿಗೆ ಪ್ರಖರತೆ. ದೇಹ–ಬುದ್ಧಿ–ಇಂದ್ರಿಯಗಳನ್ನು ಬೆಳಗಿಸುತ್ತ ತಾನು ಮಾತ್ರ ಯಾರಿಂದಲೂ ಬೆಳಗದ ಸ್ವಯಂಪ್ರಕಾಶಿತವಾದ ಆತ್ಮನ ಬೆಳಕು ಅದೇ. ಜಗತ್ತಿಗೇ ಬೆಳಕಾದ ಸೂರ್ಯನನ್ನು ಬೆಳಗಿಸುವ ಬೆಳಕೂ ಅದೇ. ಇದು ಬೃಹದಾರಣ್ಯಕದಲ್ಲಿ ಬರುವ ಒಂದು ಪ್ರಸಂಗ.

---

ಸೂರ್ಯನ ರಶ್ಮಿ ಎಲ್ಲಾ ಕಡೆಯಲ್ಲಿಯೂ ಬೀಳುತ್ತದೆ. ಆದರೆ ಎಲ್ಲಿ ಅದು ನೀರು, ಕನ್ನಡಿ, ನುಣುಪಾದ ಲೋಹ ಮುಂತಾದುವುಗಳ ಮೇಲೆ ಬೀಳುತ್ತದೆಯೋ ಆ ಮಧ್ಯವರ್ತಿ ಮಾತ್ರ 'ಸೂರ್ಯರಶ್ಮಿ'ಯನ್ನು ಪ್ರತಿಬಿಂಬಿಸುತ್ತದೆ. ಇದರಂತೆಯೇ, ದೇವರು ಎಲ್ಲಾ ಕಡೆಯಲ್ಲಿ ಇದ್ದರೂ ಯಾರು ಶುದ್ಧಾತ್ಮರೋ ಅವರಲ್ಲಿ ಮಾತ್ರ ವ್ಯಕ್ತನಾಗುತ್ತಾನೆ.

ಮನುಷ್ಯನಿಗೆ ನಿಜವಾದ ಜ್ಞಾನಪ್ರಾಪ್ತಿಯಾದರೆ ಅವನು ದೇವರನ್ನು ಎಲ್ಲೋ ದೂರದಲ್ಲಿ ಇರುವವನೆಂದು ಭಾವಿಸುವುದಿಲ್ಲ. ಅವನು ಅಂದಿನಿಂದ ದೂರದಲ್ಲಿರುವವನೆಂದು ತೋರುವುದಿಲ್ಲ. ಅವನು ಅಂತರಂಗದಲ್ಲಿರುವವನು ಎಂದು ಭಾಸವಾಗುವುದು. ಅವನು ಎಲ್ಲರ ಅಂತರಂಗದಲ್ಲೂ ಇರುವನು. ಅವನನ್ನು ಹುಡುಕುವವರೆಲ್ಲ ಅಲ್ಲಿ ಕಾಣುತ್ತಾರೆ.

–ಶ್ರೀರಾಮಕೃಷ್ಣ ಪರಮಹಂಸ